2019 ಕ.ತೀ.ವ 1710

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

### ಕವಿರಾಜ್ ಎಸ್. –ವಿರುದ್ಧ– ಕರ್ನಾಟಕ ರಾಜ್ಯ*

ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅರ್ಜಿ.

ಅರ್ಜಿದಾರನ ಮೇಲೆ ಭಾರತ ದಂಡ ಸಂಹಿತೆಯ 309, 504 ಹಾಗೂ 120–ಬಿ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪ ಪಟ್ಟಿಯನ್ನು ರೂಪಿಸಲಾಗಿದೆ. ಆರೋಪ ಪಟ್ಟಿಯಲ್ಲಿ ಕಂಡುಬರುವಂತೆ, ದಿನಾಂಕ: 24.10.2016ರಂದಿನ ರಾತ್ರಿ ವೇಳೆಯಲ್ಲಿ, ಚಿತ್ರದುರ್ಗದ ಹಿರಿಯೂರಿನ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡತದ ಮೇಲೆ ಅಪರಾಧ ಸಂಖ್ಯೆ: 350/2016ರಿಂದ ಉದ್ಭವಿಸಿದ ಸಿ.ಸಿ.ಸಂಖ್ಯೆ: 105/2017ರಲ್ಲಿನ ಆಪಾದಿತ ಸಂಖ್ಯೆ:1 ಎಂದು ದೋಷಾರೋಪಿತನಾದ ಈ ಅರ್ಜಿದಾರನು ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದೊಂದಿಗೆ ಮನೆ ಬಿಟ್ಟು ತೆರಳಿರುತ್ತಾನೆ. ಆ ತರುವಾಯ, ತುಮಕೂರಿನಲ್ಲಿರುವ ಗಾಯತ್ರಿ ಲಾಡ್ಜ್‌ಗೆ ಹೋಗಿರುತ್ತಾನೆ. ದಿನಾಂಕ: 25.10.2016ರಂದು ಬೆಳಗ್ಗೆ 9.15ರ ಸುಮಾರಿಗೆ ಆಪಾದಿತ ಸಂಖ್ಯೆ:1ರ ತಂದೆ ಆಪಾದಿತ ಸಂಖ್ಯೆ:2 ಮರಣಪತ್ರವನ್ನು ತೆಗೆದುಕೊಂಡು ಮನೆಯಲ್ಲಿ ಆಪಾದಿತ ಸಂಖ್ಯೆ:1 ಈ ಪತ್ರವನ್ನು ಬಿಟ್ಟು ತೆರಳಿದ್ದಾನೆಂದು ಆಪಾದಿಸಿ, ಗ್ರಾಮಾಂತರ ಪೊಲೀಸ್ ಠಾಣೆಗೆ ತೆರಳಿ, ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಅರುಣ್ ರಂಗರಾಜನ್ –ವಿರುದ್ಧ– ಆಪಾದನೆಗಳನ್ನು ಮಾಡಿ, ಸಂಕಟಕಾರಕ ಆಪಾದನೆಗಳು ಮುಂತಾದವುಗಳೊಂದಿಗೆ ಪೊಲೀಸರನ್ನು ಭಯಪಡಿಸಿರುತ್ತಾನೆ. ಈ ಆಪಾದನೆಗಳ ಮೇಲೆ ಆರೋಪಪಟ್ಟಿಯನ್ನು ದಾಖಲಿಸಲಾಗಿರುತ್ತದೆ.

*ಕ್ರಿಮಿನಲ್ ಅರ್ಜಿ ಸಂಖ್ಯೆ: 5490/2017, ದಿನಾಂಕ 27ನೇ ಜೂನ್, 2018.

ಈ ಅರ್ಜಿದಾರನ ವಿರುದ್ಧ ಇರುವ ಒಂದೇ ಆಪಾದನೆಯೆಂದರೆ ಆತ್ಮಹತ್ಯೆ ಮಾಡಿಕೊಳ್ಳಲು ಆತ ಪ್ರಯತ್ನಿಸಿದ್ದಾಗಿರುತ್ತದೆ. ಆದರೆ ಇಡೀ ಆರೋಪ ಪಟ್ಟಿಯನ್ನು ಪರಿಶೀಲಿಸಿದಾಗ, ಅರ್ಜಿದಾರನು ಯಾವರೀತಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರೆಂಬುದರ ಬಗ್ಗೆ ಯಾವುದೇ ಆಪಾದನೆ ಇರುವುದಿಲ್ಲ. ಈತ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ ಬಗೆ ಹಾಗೂ ಅದರಿಂದ ಬದುಕುಳಿದ ಬಗೆಯಾಗಲೀ ತೋರಿಸುವಂಥ ಯಾವುದೇ ಸಾಕ್ಷ್ಯವಿರುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಾಗಿನ ಯಾವುದೇ ಸಿದ್ಧತೆ ಅಥವಾ ಕೇವಲ ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶವು ಭಾರತ ದಂಡ ಸಂಹಿತೆಯ 309ನೇ ಪ್ರಕರಣದಡಿಯಲ್ಲಿ ಯಾವುದೇ ಕಾರಣಕ್ಕೂ ದಂಡನೀಯವಾಗಿರುವುದಿಲ್ಲ.

ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಗಮನಿಸಿ, ಪೊಲೀಸರು ದಾಖಲಿಸಿಕೊಂಡಿದ್ದಂಥ ಮಂಜುನಾಥ್‌ರವರ ಹೇಳಿಕೆಯನ್ನು ಪರಿಶೀಲಿಸಲಾಗಿರುತ್ತದೆ. ಈತ ಇಲ್ಲಿನ ಅರ್ಜಿದಾರರ ಆಪ್ತ ಗೆಳೆಯನಲ್ಲದೆ ಬೇರೆ ಯಾರೋ ಆಗಿರುವುದಿಲ್ಲ. ಈತ ದಿನಾಂಕ 20.10.2016ರಂದು ಅರ್ಜಿದಾರನು, ಸದರಿ ಮಂಜುನಾಥ್‌ನೊಂದಿಗೆ ಚಿತ್ರದುರ್ಗದ ಪೊಲೀಸ್ ಸೂಪರಿಂಟೆಂಡೆಂಟರ ವರ್ತನೆಯಿಂದ ರೋಸಿಹೋಗಿರುವುದಾಗಿ ಹೇಳಿಕೊಂಡಿದ್ದನೆಂದೂ ಆದ್ದರಿಂದ, ಸಯಲು ಬಯಸಿರುತ್ತಾನೆಂದು ತಿಳಿಸಿರುತ್ತಾನೆ. ತರುವಾಯ ಸದರಿ ಮಂಜುನಾಥ್ ಈ ಅರ್ಜಿದಾರನು ತುಮಕೂರಿಗೆ ತನ್ನ ಗೆಳೆಯರೊಂದಿಗೆ ಕೆಲವು ದಿನಗಳ ಕಾಲ ಇರಲು ತೆರಳಿರುತ್ತಾನೆಂದೂ ತಿಳಿಸಿರುತ್ತಾನೆ. ಆ ತರುವಾಯ, ಈತ ತನ್ನ ಗೆಳೆಯರ ಮನೆಗೆ ತೆರಳಿರುವುದು ಕಂಡು ಬಂದಿರುತ್ತದೆ. ಆದರೆ ಎಲ್ಲಿಯೂ ಆತ್ಮಹತ್ಯೆ ಮಾಡಿಕೊಳ್ಳಲು ಯಾವುದೇ ಪ್ರಯತ್ನ ಮಾಡಿರುತ್ತಾನೆಂದು ಹೇಳಿರುವುದಿಲ್ಲ.

ಅರ್ಜಿಯನ್ನು ಅಂಗೀಕರಿಸಲಾಗಿದೆ. ತದನುಸಾರವಾಗಿ, ಭಾರತ ದಂಡ ಸಂಹಿತೆಯ 120–ಬಿ ಪ್ರಕರಣದೊಂದಿಗೆ ಓದಲಾದ 309, 504ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ) ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಹಿರಿಯೂರು, ಚಿತ್ರದುರ್ಗದ ಕಡತದ ಮೇಲೆ ಇತ್ಯರ್ಥದಲ್ಲಿರುವ ಸಿ.ಸಿ.ಸಂಖ್ಯೆ:105/2017ನ್ನು ಈ ಮೂಲಕ ಅರ್ಜಿದಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ ರದ್ದುಪಡಿಸಲಾಗಿರುತ್ತದೆ.

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. (2001) 8 ಎಸ್‌ಸಿಸಿ 633*
*ಸತ್ವೀರ್ ಸಿಂಗ್ ಹಾಗೂ ಇತರರು –ವಿರುದ್ಧ–*
*ಪಂಜಾಬ್ ಸರ್ಕಾರ ಹಾಗೂ ಇನ್ನೊಬ್ಬರು* *(ಉಲ್ಲೇ) 6*

ಅರ್ಜಿದಾರರ ಪರ : ಶ್ರೀ ಎಂ. ಶಶಿಧರ್, ವಕೀಲರು.
ಪ್ರತ್ಯರ್ಜಿದಾರರ ಪರ : ಶ್ರೀ ಚೇತನ್ ದೇಸಾಯಿ, ಎಚ್‌ಸಿಜಿಪಿ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ:**

ಅರ್ಜಿದಾರರ ಪರ ಮಾನ್ಯ ವಕೀಲರು ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರುಗಳ ವಾದವನ್ನು ಆಲಿಸಲಾಗಿದೆ. ದಾಖಲೆಗಳನ್ನು ಪರಿಶೀಲಿಸಲಾಗಿರುತ್ತದೆ.

2. ಅರ್ಜಿದಾರನ ಮೇಲೆ ಭಾರತ ದಂಡ ಸಂಹಿತೆಯ 309, 504 ಹಾಗೂ 120–ಬಿ ಪ್ರಕರಣಗಳಡಿಯಲ್ಲಿನ ಅಪರಾಧಗಳಿಗೆ ಸಂಬಂಧಿಸಿದಂತೆ ಆರೋಪ ಪಟ್ಟಿಯನ್ನು ರೂಪಿಸಲಾಗಿದೆ. ಆರೋಪ ಪಟ್ಟಿಯಲ್ಲಿ ಕಂಡುಬರುವಂತೆ, ದಿನಾಂಕ: 24.10.2016ರಂದಿನ ರಾತ್ರಿ ವೇಳೆಯಲ್ಲಿ, ಚಿತ್ರದುರ್ಗದ ಹಿರಿಯೂರಿನ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಜೆ.ಎಂ.ಎಫ್.ಸಿ. ನ್ಯಾಯಾಲಯದ ಕಡತದ ಮೇಲೆ ಅಪರಾಧ ಸಂಖ್ಯೆ: 350/2016ರಿಂದ ಉದ್ಭವಿಸಿದ ಸಿ.ಸಿ.ಸಂಖ್ಯೆ: 105/ 2017ರಲ್ಲಿನ ಆಪಾದಿತ ಸಂಖ್ಯೆ:1 ಎಂದು ದೋಷಾರೋಪಿತನಾದ ಈ ಅರ್ಜಿದಾರನು ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದೊಂದಿಗೆ ಮನೆ ಬಿಟ್ಟು ತೆರಳಿರುತ್ತಾನೆ. ಆ ತರುವಾಯ, ತುಮಕೂರಿನಲ್ಲಿರುವ ಗಾಯತ್ರಿ ಲಾಡ್ಜ್‌ಗೆ ಹೋಗಿರುತ್ತಾನೆ. ದಿನಾಂಕ:

25.10.2016ರಂದು ಬೆಳಿಗ್ಗೆ 9.15ರ ಸುಮಾರಿಗೆ ಆಪಾದಿತ ಸಂಖ್ಯೆ:1ರ ತಂದೆ ಆಪಾದಿತ ಸಂಖ್ಯೆ:2 ಮರಣಪತ್ರವನ್ನು ತೆಗೆದುಕೊಂಡು ಮನೆಯಲ್ಲಿ ಆಪಾದಿತ ಸಂಖ್ಯೆ:1 ಈ ಪತ್ರವನ್ನು ಬಿಟ್ಟು ತೆರಳಿದ್ದಾನೆಂದು ಆಪಾದಿಸಿ, ಗ್ರಾಮಾಂತರ ಪೊಲೀಸ್ ಠಾಣೆಗೆ ತೆರಳಿ, ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ***ಅರುಣ್ ರಂಗರಾಜನ್ –ವಿರುದ್ಧ– ಆಪಾದನೆಗಳನ್ನು ಮಾಡಿ,*** ಸಂಕಟಕಾರಕ ಆಪಾದನೆಗಳು ಮುಂತಾದವುಗಳೊಂದಿಗೆ ಪೊಲೀಸರನ್ನು ಭಯಪಡಿಸಿರುತ್ತಾನೆ. ಈ ಆಪಾದನೆಗಳ ಮೇಲೆ ಆರೋಪಪಟ್ಟಿಯನ್ನು ದಾಖಲಿಸಲಾಗಿರುತ್ತದೆ.

3. ಈ ಅರ್ಜಿದಾರನ ವಿರುದ್ಧ ಇರುವ ಒಂದೇ ಆಪಾದನೆಯೆಂದರೆ ಆತ್ಮಹತ್ಯೆ ಮಾಡಿಕೊಳ್ಳಲು ಆತ ಪ್ರಯತ್ನಿಸಿದ್ದಾಗಿರುತ್ತದೆ. ಆದರೆ ಇಡೀ ಆರೋಪ ಪಟ್ಟಿಯನ್ನು ಪರಿಶೀಲಿಸಿದಾಗ, ಅರ್ಜಿದಾರನು ಯಾವರೀತಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರೆಂಬುದರ ಬಗ್ಗೆ ಯಾವುದೇ ಆಪಾದನೆ ಇರುವುದಿಲ್ಲ. ಈತ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ ಬಗೆ ಹಾಗೂ ಅದರಿಂದ ಬದುಕುಳಿದ ಬಗೆಯಾಗಲೀ ತೋರಿಸುವಂಥ ಯಾವುದೇ ಸಾಕ್ಷ್ಯವಿರುವುದಿಲ್ಲ. ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಾಗಿನ ಯಾವುದೇ ಸಿದ್ಧತೆ ಅಥವಾ ಕೇವಲ ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶವು ಭಾರತ ದಂಡ ಸಂಹಿತೆಯ 309ನೇ ಪ್ರಕರಣದಡಿಯಲ್ಲಿ ಯಾವುದೇ ಕಾರಣಕ್ಕೂ ದಂಡನೀಯವಾಗಿರುವುದಿಲ್ಲ.

4. ಭಾರತ ದಂಡ ಸಂಹಿತೆಯ 309ನೇ ಪ್ರಕರಣವು ಮೂಲದಲ್ಲಿ ಈ ಮುಂದಿನಂತಿರುತ್ತದೆ:

> *"**309. ಆತ್ಮಹತ್ಯೆ ಪ್ರಯತ್ನ.**– ಯಾವನೇ ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದರೆ ಮತ್ತು ಅಂಥ ಅಪರಾಧವನ್ನು ಮಾಡುವುದಕ್ಕಾಗಿ ಯಾವುದೇ ಕೃತ್ಯವನ್ನು ಮಾಡಿದರೆ, ಅವನು ಒಂದು ವರ್ಷದವರೆಗಿನ ಸಾದಾ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು."*

5. ಆದ್ದರಿಂದ, ಎಸಗುವಂಥ ಕೃತ್ಯಗಳನ್ನು, ಪ್ರಯತ್ನದ ಅವಧಿಯಲ್ಲಿಯೇ ಮಾಡಬೇಕು. ಅನ್ಯಥಾ ಯಾವುದೇ ಅಪರಾಧವನ್ನು ಎಸಗಿರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಭಾರತ ದಂಡ ಸಂಹಿತೆಯ 309ನೇ ಪ್ರಕರಣವು, ವಾಸ್ತವವಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿ, ಆದರೆ ಬದುಕುಳಿದಂಥ ವ್ಯಕ್ತಿಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಪ್ರಸ್ತುತ ವಾಸ್ತವ ಸ್ಥಿತಿಯು, ಅವಶ್ಯವಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾಗದಂಥದ್ದಾಗಿರುತ್ತದೆ. ಭಾರತ ದಂಡ ಸಂಹಿತೆಯ 34ನೇ ಆವೃತ್ತಿಯ ಲೇಖಕರಾದ ರತನ್‌ಲಾಲ್ ಹಾಗೂ ಧೀರಜ್ ಲಾಲ್ ಉದ್ಧರಿಸಿದಂಥ ಸಂದರ್ಭವನ್ನು ದೃಷ್ಟಾಂತದ ರೂಪದಲ್ಲಿ ಈ ಮುಂದಿನಂತೆ ನಿರೂಪಿಸಲಾಗಿದೆ:

> *"ಒಬ್ಬ ಮಹಿಳೆ ತಾನು ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದೊಂದಿಗೆ ಬಾವಿಗೆ ಬೀಳಲು ಓಡುತ್ತಿರುತ್ತಾಳೆ. ಆಗ ಆಕೆಯನ್ನು ಒಬ್ಬ ವ್ಯಕ್ತಿ ತಡೆಯುತ್ತಾನೆ. ಇದರಿಂದ ಆಕೆ ತನ್ನ ಮನಸ್ಸನ್ನು ಬದಲಾಯಿಸಿಕೊಳ್ಳಬಹುದಾಗಿದ್ದು, ಈಕೆ, ಅಪರಾಧ ಮಾಡುವುದಕ್ಕೆ ಸಂಬಂಧಪಡಬಹುದಾದಂಥ ಯಾವುದನ್ನೇ ಆಗಲಿ ಮಾಡುವುದಕ್ಕೆ ಮೊದಲು ಸಿಕ್ಕಿಬೀಳಬಹುದೆಂದು ಆಕೆ ಮತ್ತೆ ಈ ಸಂಬಂಧದಲ್ಲಿ ಯಾವುದೇ ಪ್ರಯತ್ನವನ್ನು ಮಾಡುವುದಿಲ್ಲ".*

6. ಆದ್ದರಿಂದ, ವಾಸ್ತವವಾಗಿ ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳಲು ಯಾವುದೇ ಪ್ರಯತ್ನವಿರುವುದಿಲ್ಲ. ಈ ಸಂದರ್ಭದಲ್ಲಿ ***ಸತ್ವೀರ್ ಸಿಂಗ್ ಹಾಗೂ ಇತರರು –ವಿರುದ್ಧ – ಪಂಜಾಬ್ ಸರ್ಕಾರ ಹಾಗೂ ಇನ್ನೊಬ್ಬರು***[1] ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಉಲ್ಲೇಖಿಸುವುದೂ ಯುಕ್ತವಾದುದೇ ಆಗಿರುತ್ತದೆ. ಅದರಲ್ಲಿ ಸರ್ವೋಚ್ಚ ನ್ಯಾಯಾಲಯವು ಅಪರಾಧ ಮಾಡಲು ಪ್ರಯತ್ನಿಸುವುದೂ ಭಾರತ ದಂಡ ಸಂಹಿತೆಯ 309ನೇ ಪ್ರಕರಣ ಅಥವಾ 511ಪ್ರಕರಣದ ಉಪ–ಪ್ರಕರಣಗಳನ್ನು ಅನ್ವಯಿಸಲು ಅವಶ್ಯಕ ಸಂದರ್ಭವಾಗಿರುತ್ತದೆಂದು ಅಭಿಪ್ರಾಯಪಟ್ಟಿರುತ್ತದೆ.

1. (2001) 8 ಎಸ್‌ಸಿಸಿ 633

7. ಪ್ರಕರಣದ ವಾಸ್ತವಾಂಶಗಳು ಹಾಗೂ ಸಂದರ್ಭಗಳನ್ನು ಗಮನಿಸಿ, ಪೊಲೀಸರು ದಾಖಲಿಸಿಕೊಂಡಿದ್ದಂಥ ಮಂಜುನಾಥ್‌ರವರ ಹೇಳಿಕೆಯನ್ನು ಪರಿಶೀಲಿಸಲಾಗಿರುತ್ತದೆ. ಈತ ಇಲ್ಲಿನ ಅರ್ಜಿದಾರರ ಆಪ್ತ ಗೆಳೆಯನಲ್ಲದೆ ಬೇರೆ ಯಾರೋ ಆಗಿರುವುದಿಲ್ಲ. ಈತ ದಿನಾಂಕ 20.10.2016ರಂದು ಅರ್ಜಿದಾರನು, ಸದರಿ ಮಂಜುನಾಥ್‌ನೊಂದಿಗೆ ಚಿತ್ರದುರ್ಗದ ಪೊಲೀಸ್ ಸೂಪರಿಂಟೆಂಡೆಂಟರ ವರ್ತನೆಯಿಂದ ರೋಸಿಹೋಗಿರುವುದಾಗಿ ಹೇಳಿಕೊಂಡಿದ್ದನೆಂದೂ ಆದ್ದರಿಂದ, ಸಯಲು ಬಯಸಿರುತ್ತಾನೆಂದು ತಿಳಿಸಿರುತ್ತಾನೆ. ತರುವಾಯ ಸದರಿ ಮಂಜುನಾಥ್ ಈ ಅರ್ಜಿದಾರನು ತುಮಕೂರಿಗೆ ತನ್ನ ಗೆಳೆಯರೊಂದಿಗೆ ಕೆಲವು ದಿನಗಳ ಕಾಲ ಇರಲು ತೆರಳಿರುತ್ತಾನೆಂದೂ ತಿಳಿಸಿರುತ್ತಾನೆ. ಆ ತರುವಾಯ, ಈತ ತನ್ನ ಗೆಳೆಯರ ಮನೆಗೆ ತೆರಳಿರುವುದು ಕಂಡು ಬಂದಿರುತ್ತದೆ. ಆದರೆ ಎಲ್ಲಿಯೂ ಆತ್ಮಹತ್ಯೆ ಮಾಡಿಕೊಳ್ಳಲು ಯಾವುದೇ ಪ್ರಯತ್ನ ಮಾಡಿರುತ್ತಾನೆಂದು ಹೇಳಿರುವುದಿಲ್ಲ.

8. ಶ್ರೀ ಸುರೇಶ್‌ರವರ ಹೇಳಿಕೆಯು, ದಿನಾಂಕ: 26.10.2016ರಂದು ಅರ್ಜಿದಾರನು, ತುಮಕೂರಿನ ಅಶೋಕ್‌ನಗರದಲ್ಲಿರುವ ಗಾಯತ್ರಿ ಲಾಡ್ಜ್‌ನಲ್ಲಿದ್ದನೆಂದು ಹೇಳಿ ಸಂದೇಹವನ್ನು ನಿವಾರಿಸಿರುತ್ತಾರೆ. ದಿನಾಂಕ: 26.10.2016ರಂದು ಪೊಲೀಸರು ಸದರಿ ಲಾಡ್ಜ್‌ಗೆ ಭೇಟಿ ನೀಡಿ, ಅರ್ಜಿದಾರರ ಪೋಟೋಗಳನ್ನು ತೋರಿಸಿರುತ್ತಾರೆ ಹಾಗೂ ಈತ ಇಲ್ಲಿನ ಅರ್ಜಿದಾರನೇ ಈ ವ್ಯಕ್ತಿಯೆಂದು ಗುರುತಿಸಿರುತ್ತಾನೆ. ಪೊಲೀಸರು ಈತನನ್ನು ಸಂಪರ್ಕಿಸಿ, ಸಾಕ್ಷ್ಯವನ್ನು ವಿಚಾರಣೆ ಮಾಡಿರುತ್ತಾರೆ. ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಅರ್ಜಿದಾರನು ಅವರ ಲಾಡ್ಜ್‌ನಲ್ಲಿ ಇದ್ದನೆಂದು ಈ ಸಾಕ್ಷಿದಾರನು ಹೇಳಿರುತ್ತಾನೆ. ಆದರೆ ಆಪಾದಿತನು ದಿನಾಂಕ: 26.10.2016ರಂದು ಸಿಕ್ಕಿಬಿದ್ದಿರುತ್ತಾನೆ. ದಿನಾಂಕ: 25.10.2016ರಂದು ಲಾಡ್ಜ್ ಕೊಠಡಿಯಲ್ಲಿದ್ದಾಗ್ಯೂ, ಮರುದಿನ ಸದರಿ ಕೊಠಡಿಯನ್ನು ಬೀಗ ಹಾಕಿ ಈತ ಹೊರಟುಬಿಟ್ಟಿರುತ್ತಾನೆ. ಇದು ಅರ್ಜಿದಾರ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಬಯಸಿದ್ದಾಗ್ಯೂ, ದಿನಾಂಕ:25.10.2016ರಂದು ಲಾಡ್ಜ್‌ನಲ್ಲಿ ಇದಕ್ಕಾಗಿ ವಿಫುಲ ಅವಕಾಶವಿದ್ದಾಗ್ಯೂ ಈತ ಈ ಸಂಬಂಧದಲ್ಲಿ ಯಾವುದೇ ಪ್ರಯತ್ನ ಮಾಡಿರುವುದಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ವಾಸ್ತವವಾಗಿ ಆಪಾದಿತ–ಅರ್ಜಿದಾರ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿರುತ್ತಾನೆಂದು ತೋರಿಸಲು

ಯಾವುದೇ ದಾಖಲೆಗಳಿರುವುದಿಲ್ಲ. ಆದ್ದರಿಂದ, ಈ ಸಂಬಂಧದಲ್ಲಿ ನಿರುಪಾಧಿತವಾಗಿ ಭಾರತ ದಂಡ ಸಂಹಿತೆಯ 309ನೇ ಪ್ರಕರಣದ ಯಾವುದೇ ಅಂಶಗಳು ಲಭ್ಯವಾಗಿರುವುದಿಲ್ಲ. ಹಾಗಾಗಿ, ಭಾರತ ದಂಡ ಸಂಹಿತೆಯ 309ನೇ ಪ್ರಕರಣದಡಿಯಲ್ಲಿನ ನಿರೂಪಿತವಾದ ಅಪರಾಧದ ನಿರೂಪಣೆಯು, ಸ್ವತಃ ಇಲ್ಲಿ ರೂಪಿತವಾಗಿರುವುದಿಲ್ಲ. ಅದರಂತೆ, ಅರ್ಜಿದಾರರ ವಿರುದ್ಧದ ವ್ಯವಹರಣೆಗಳನ್ನು ಮೇಲಿನ ಸದರಿ ಅಪರಾಧಗಳಿಗೆ ಸಂಬಂಧಿಸಿದಂತೆ ಮುಂದುವರೆಸಲಾಗುವುದಿಲ್ಲ. ಹಾಗಾಗಿ ಈ ಮುಂದಿನಂತೆ ಆದೇಶಿಸಲಾಗಿರುತ್ತದೆ.

## ಆಜ್ಞೆ

ಅರ್ಜಿಯನ್ನು ಅಂಗೀಕರಿಸಲಾಗಿದೆ. ತದನುಸಾರವಾಗಿ, ಭಾರತ ದಂಡ ಸಂಹಿತೆಯ 120–ಬಿ ಪ್ರಕರಣದೊಂದಿಗೆ ಓದಲಾದ 309, 504ನೇ ಪ್ರಕರಣಗಳಡಿಯಲ್ಲಿ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದಂತೆ ಸಿವಿಲ್ ನ್ಯಾಯಾಧೀಶ (ಹಿರಿಯ ವಿಭಾಗ) ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಹಿರಿಯೂರು, ಚಿತ್ರದುರ್ಗದ ಕಡತದ ಮೇಲೆ ಇತ್ಯರ್ಥದಲ್ಲಿರುವ ಸಿ.ಸಿ.ಸಂಖ್ಯೆ:105/2017ನ್ನು ಈ ಮೂಲಕ ಅರ್ಜಿದಾರರಿಗೆ ಸಂಬಂಧಪಡುವಷ್ಟರ ಮಟ್ಟಿಗೆ ರದ್ದು ಪಡಿಸಲಾಗಿರುತ್ತದೆ.

---